# ಅಧ್ಯಯನದ ಫಲಿತಗಳು

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀ ಸಂವೇದನೆಗೆ ಸಂಬಂಧಿಸಿದಂತೆ ಮಹಿಳೆಯರಿಂದ ರಚಿತಗೊಂಡ ಕಾದಂಬರಿಗಳಲ್ಲಿನ ವಸ್ತುವಿಷಯಗಳನ್ನು ವಿಮರ್ಶಿಸಿ, ವಿಶ್ಲೇಷಿಸಿ ಅಧ್ಯಯನ ಮಾಡುವುದು ಪ್ರಸ್ತುತ ಮಹಾಪ್ರಬಂಧದ ಆಶಯವಾಗಿದೆ. ೨೦ನೇ ಶತಮಾನದ ಬದಲಾದ ಕಾಲಮಾನದಲ್ಲಿ ಮಹಿಳೆಯರಿಗೆ ಸ್ವತಂತ್ರ, ಶಿಕ್ಷಣ, ಉದ್ಯೋಗ ಲಭಿಸಿದಂತೆ ಅವರ ಯೋಚನಾಲಹರಿಯ ಕ್ರಮಗಳು ಬದಲಾಗಿ ಭಿನ್ನವಾಗಿ ನವೀನ ಬಗೆಯ ಕಾವ್ಯ, ಕಥೆ, ನಾಟಕ ಕಾದಂಬರಿಗಳು ಅವರಿಂದ ಸೃಷ್ಟಿಗೊಳ್ಳತೊಡಗಿದವು. ವಿಶೇಷವಾಗಿ ಕಾದಂಬರಿ ಪ್ರಕಾರದಲ್ಲಿಯೂ ಮಹಿಳಾ ಅಭಿವ್ಯಕ್ತಿ ವಿಭಿನ್ನ ದೃಷ್ಟಿಕೋನಗಳಲ್ಲಿ ಹರಿಯತೊಡಗಿತು. ಅಂತಹ ದೃಷ್ಠಿಕೋನ ಬೇರೆ ಬೇರೆ ಮಹಿಳೆಯರ ಕಾದಂಬರಿಗಳಲ್ಲಿ ವಿಭಿನ್ನ ಮಟ್ಟದಲ್ಲಿ ಚಿಂತಿತಗೊಂಡಿರುವ ಬಗೆ ಹೇಗೆ ಎಂಬುದನ್ನು ಈ ಮಹಾಪ್ರಬಂಧದಲ್ಲಿ ಚರ್ಚೆಗೊಳಪಡಿಸಲಾಗಿದೆ.

ಕಾದಂಬರಿ ಸಾಹಿತ್ಯ ಪ್ರಕಾರವು ಸಮಾಜದಲ್ಲಿ ಇರುವಂತಹ ಹಲವು ವಿಚಾರಗಳನ್ನೇ ಹೆಕ್ಕಿ ತೆಗೆದು ಅದನ್ನು ದಾಖಲಿಸಿ ಜನರಲ್ಲಿ ಅರಿವನ್ನು ಮೂಡಿಸುವುದಲ್ಲದೆ, ಸಮಸ್ಯಾ ರೂಪದಲ್ಲಿ, ಪರಿಹಾರ ರೂಪದಲ್ಲಿ, ವಾಸ್ತವದ ನೆಲೆಗಟ್ಟಿನ ಮೇಲೆ ರೂಪುಗೊಳ್ಳುವ ಪರಿಣಾಮಕಾರಿಯಾದ ಪ್ರಕಾರಗಳಲ್ಲೊಂದು ಹಾಗೆಯೇ ಸರಳವಾಗಿ ಸಹೃದಯರಲ್ಲಿ ಆಸಕ್ತಿ ಕೆರಳಿಸಿ ಬಹುಬೇಗ ಜೀರ್ಣಿಸಿಕೊಳ್ಳುವ ಮತ್ತು ನಿರಂತರ ಓದಿನಿಂದ ಜನರಲ್ಲಿ ಬೇಸರವನ್ನು ಕಳೆಯುವ ಸಾಹಿತ್ಯದ ಒಂದು ಪ್ರಕಾರವು ಹೌದು. ಕಥಾರೂಪದಲ್ಲಿರುವ ಕಾದಂಬರಿ ಹಾಸ್ಯ, ಕುತೂಹಲ, ನವಿರಾದ ಭಾವನೆ ಇವುಗಳೊಂದಿಗೆ ಸಮಾಜದ ನಿಜಮುಖ ದರ್ಶನದಿಂದ, ಓದುಗರಲ್ಲಿ ಕಾದಂಬರಿಯ ಆಕರ್ಷಣೆ ಅಧಿಕವಾಗಿರುವುದರಿಂದ ಮಹಾಪ್ರಬಂಧಕ್ಕಾಗಿ ಕಾದಂಬರಿಯನ್ನು ಆಯ್ಕೆ ಮಾಡಿಕೊಂಡಿರುತ್ತೇನೆ.

ಈ ಕಾದಂಬರಿಗಳು ಸಮಾಜದಲ್ಲಿನವರ ನೋವು–ನಲಿವು, ಬದುಕು–ಬವಣೆ, ಸುಖ–ಸಂತೋಷ ಒಂದು ಕುಟುಂಬದವರ ಮೂಲಕ, ಒಂದು ಪಾತ್ರದ ಮೂಲಕ ಸುತ್ತ–ಮುತ್ತಲಿನ ವಾತಾವರಣದ ಪರಿಚಯ ಮಾಡಿಸುತ್ತದೆ. ಸಮಾಜದಲ್ಲಿ ತಾಂಡವವಾಡುತ್ತಿರುವ ಅನೇಕ ಸಮಸ್ಯೆಗಳು ನಮ್ಮ ಅರಿವಿಗೆ ಬಂದಿದ್ದರು, ಬಾರದಿದ್ದರು ಸಮಸ್ಯೆಯೇ ಅಲ್ಲವೆಂಬ ಭಾವನೆಯಿಂದ ಬದುಕುವವರಾಗಿದ್ದೇವೆ. ಅವುಗಳಲ್ಲಿ ಗಂಡು–ಹೆಣ್ಣಿನ ನಡುವೆ ಇರುವ ಭಿನ್ನ ನೆಲೆಗಳು ಒಂದಾಗಿವೆ.

ಸಮಾಜದಲ್ಲಿ ಹೆಣ್ಣು–ಗಂಡು ಎಂದು ಎರಡು ಲಿಂಗಿಗಳಾಗಿ ಜನನವಾಗುವ ಜೀವಗಳ ಸೃಷ್ಟಿ ಒಂದೇ ಆದರೂ ಪ್ರಬಲ–ದುರ್ಬಲ ಹೆಸರಿನಲ್ಲಿ ಅವರ ಬೆಳವಣಿಗೆ ವಿಕಾಸಗೊಳ್ಳುತ್ತಿದೆ. ಆ

ನಿಟ್ಟಿನಲ್ಲಿ ಬದುಕು ಸಾಗುತ್ತಿರುವುದು ಮಹಾಭಾರತ–ರಾಮಾಯಣ ಕಾಲದಿಂದಲೂ ಕಂಡುಬರುತ್ತದೆ. ಪುರಾಣಕಾಲದಿಂದಲೂ, ಆಧುನಿಕತೆ ಎಂದು ಕರೆಯಲ್ಪಡುವ ಇಂದಿನ ಕಾಲದವರೆಗೂ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಗಳು ಕಂಡುಬಂದರೂ ಲಿಂಗವಿಚಾರವಾಗಿ ತಟಸ್ಥ ಧೋರಣೆ ಕಂಡುಬರುತ್ತಿದೆ. ಇದಕ್ಕೆ ಹೆಣ್ಣು, ಗಂಡಿಗೆ ಅಧೀನ ಎಂಬ ಪೂರ್ವಗ್ರಹ ಪೀಡನೆ ನಮ್ಮ ಸಮಾಜದಲ್ಲಿ ಬೇರೂರಿದೆ. ಗಂಡಿಗೆ ಸರಿಸಮಾನವಾಗಿ ನಿಲ್ಲುವ ಹೆಣ್ಣು ಇಂದಿನ ಇಪ್ಪತ್ತೊಂದನೇ ಶತಮಾನದ ಕಾಲದಲ್ಲೂ ಕುಟುಂಬದ, ಸಮಾಜದ ತಿರಸ್ಕಾರಕ್ಕೆ ಒಳಗಾಗುತ್ತಿದ್ದಾಳೆ. ಈ ನಿಟ್ಟಿನಲ್ಲಿ ಸ್ತ್ರೀ ಪುರುಷನ ಅಧೀನಳೆ? ಸಮಾಜದಲ್ಲಿ ಎರಡನೇ ದರ್ಜೆಯಲ್ಲಿಯೇ ಬದುಕಬೇಕೆ? ಎಂಬ ಪ್ರಶ್ನೆಗಳು ಮನಸ್ಸಿಗೆ ಹೊಕ್ಕಿದಾಗ ಪರಿಸರದಲ್ಲಿ ಸ್ತ್ರೀ ಇಲ್ಲದೆ ಪುರುಷ, ಪುರುಷ ಇಲ್ಲದೆ ಸ್ತ್ರೀ ಊಹಿಸಿಕೊಳ್ಳಲು ಅಸಾಧ್ಯವಾದದ್ದು ಎಂಬ ಉತ್ತರ ಬರುತ್ತದೆ. ಇದರಿಂದ ಸ್ತ್ರೀ ಸಮಾನತೆ, ಸ್ವಾತಂತ್ರ್ಯವನ್ನು ಸಮಾಜದಲ್ಲಿ ನೆಲೆಗೊಳಿಸುವ ಪ್ರಯತ್ನದಲ್ಲಿ ಪ್ರಸ್ತುತ ಮಹಾಪ್ರಬಂಧವು ರಚಿತವಾಗಿದೆ.

ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ಶೀರ್ಷಿಕೆ **"ಸ್ತ್ರೀವಾದಿ ನೆಲೆಯಲ್ಲಿ ಕನ್ನಡದ ಪ್ರಮುಖ ಮಹಿಳಾ ಕಾದಂಬರಿಗಳು"** ಆಗಿದ್ದು, ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಹದಿಮೂರು ಲೇಖಕಿಯರು ಬರೆದಿರುವ ಒಟ್ಟು ಹದಿನಾಲ್ಕು ಕಾದಂಬರಿಗಳಲ್ಲಿ ಸ್ತ್ರೀಜೀವನ ಚಿತ್ರಣ, ಸಮಾಜದಲ್ಲಿ ಅವಳನ್ನು ಶೋಷಿಸುತ್ತಿರುವ ನೆಲೆಗಳು, ಸ್ತ್ರೀಯರಲ್ಲೂ ತನ್ನ ಅಸ್ತಿತ್ವದ ಹೆಗ್ಗುರುತು ಸ್ಥಾಪಿಸುವ ಆಶಯಗಳು ಹೀಗೆ ಅನೇಕ ವಿಚಾರಗಳನ್ನು ಕುರಿತು ವಿವರಿಸುವ, ವಿಶ್ಲೇಷಿಸುವ, ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಸಂಶೋಧನೆಯ ವಸ್ತುವಿನ್ಯಾಸವನ್ನು ಹೀಗೆ ಪರಿಚಯಿಸಬಹುದು.

- ಮಹಾಪ್ರಬಂಧದ ಆರಂಭ **'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ'**ಯನ್ನು ಒಳಗೊಂಡಿದೆ. ಇದರಲ್ಲಿ ಪ್ರಸಕ್ತ ಅಧ್ಯಯನದ ಗುರಿ–ಸಾಧ್ಯತೆಗಳನ್ನು ವಿವರಿಸಲಾಗಿದೆ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ ಹಾಗೂ ಪ್ರಸ್ತುತ ಅಧ್ಯಯನದ ವಿಭಿನ್ನತೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.
- ಮೊದಲನೇ ಅಧ್ಯಾಯ : **'ಲೇಖಕಿಯರ ಪರಿಚಯ'** ಇಲ್ಲಿ ಮಹಾಪ್ರಬಂಧದ ಅಧ್ಯಯನಕ್ಕೆ ತೆಗೆದುಕೊಂಡಿರುವ ಕಾದಂಬರಿಗಳ ಕರ್ತೃಕಾರರ ಪರಿಚಯ ಮಾಡಲಾಗಿದೆ. ಕಾದಂಬರಿಗಾರ್ತಿಯರ ಕೆಲವೊಂದು ಮುಖ್ಯವಿಚಾರಗಳನ್ನು ಕಾಲ, ಸ್ಥಳ, ವಿದ್ಯಾಭ್ಯಾಸ,

ಕೃತಿಗಳು, ಬಹುಮಾನ/ಪುರಸ್ಕಾರ, ಸಾಹಿತ್ಯ ಪ್ರವೇಶದ ಮಾರ್ಗ ಮತ್ತು ಅವರ ಸಾಹಿತ್ಯಿಕ ಕೃಷಿ ಕುರಿತ ಮಾಹಿತಿಯಿದೆ.

- ಅಧ್ಯಾಯ ಎರಡು : **'ಕಾದಂಬರಿಗಳ ವಸ್ತು ಚಿತ್ರಣ'** ಈ ಅಧ್ಯಾಯದಲ್ಲಿ ಒಂದೊಂದು ಕಾದಂಬರಿಗಳ ವಸ್ತು ವಿವರಗಳನ್ನು ನೀಡಲಾಗಿದೆ. ಕಾದಂಬರಿ ಯಾವ ವಸ್ತು ವಿಷಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂಬುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಆಯ್ಕೆ ಮಾಡಿಕೊಂಡ ಕಾದಂಬರಿಗಳಲ್ಲಿ ಸಾಮಾಜಿಕ, ಪೌರಾಣಿಕ ಕಾದಂಬರಿಗಳನ್ನು ವಿಶ್ಲೇಷಿಸಿದೆ.
- ಅಧ್ಯಾಯ ಮೂರು : **'ಲಿಂಗತಾರತಮ್ಯದ ಹಿನ್ನೆಲೆಯಲ್ಲಿ ಶೋಷಣೆ'** ಹೆಣ್ಣು ಎಲ್ಲಾ ರಂಗದಲ್ಲೂ ತಾರತಮ್ಯಕ್ಕೆ ಗುರಿಯಾಗಿದ್ದಾಳೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಕೌಟುಂಬಿಕವಾಗಿ ಹೇಗೆ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ಅತ್ಯಂತ ವಾಸ್ತವಿಕ ನೆಲೆಯಲ್ಲಿ ಕುರಿತು ಇಲ್ಲಿ ಚರ್ಚಿಸಲಾಗಿದೆ.
- ಅಧ್ಯಾಯ ನಾಲ್ಕು : **'ಆಧುನಿಕತೆಯ ವಿನ್ಯಾಸಗಳು ಮತ್ತು ಬಿಡುಗಡೆಯ ಸ್ವರೂಪ'** ಈ ಅಧ್ಯಾಯದಲ್ಲಿ ಅಬಲೆಯರಿಗೆ ಪುರುಷಪ್ರಧಾನ ಸಮಾಜದಲ್ಲಿ ಸ್ವತಂತ್ರವಾಗಿ ಬದುಕುವ ಮಾರ್ಗಗಳನ್ನು ಹೇಳಿದೆ. ಹೆಣ್ಣಾದವಳು ಪರಾಧೀನತೆಯಿಂದ, ಪರಾವಲಂಬಿತನದಿಂದ ಮುಕ್ತಿ ಪಡೆಯಬೇಕಾದರೆ ಶಿಕ್ಷಣ, ಸ್ವಾವಲಂಬಿ ಜೀವನಕ್ಕೆ ಉದ್ಯೋಗಬೇಕೆಂದು, ಈ ಎರಡೂ ಸುಲಭವಾಗಿ ದಕ್ಕದಾದಾಗ ಪ್ರತಿಭಟಿಸುವಿಕೆ ಪ್ರತಿಯೊಬ್ಬರ ವ್ಯಕ್ತಿತ್ವವನ್ನು ಸ್ಥಾಪಿಸಲು ಅತ್ಯಗತ್ಯ ಎಂಬುದನ್ನು ಇಲ್ಲಿನ ಕಾದಂಬರಿಗಳ ಸ್ತ್ರೀಪಾತ್ರಗಳ ಮೂಲಕ ಅರಿವು ಮೂಡಿಸಿದೆ. ಶಿಕ್ಷಣ, ಉದ್ಯೋಗ, ಪ್ರತಿಭಟಿಸುವ ನೆಲೆ ಕಂಡುಕೊಂಡವರು ಸ್ತ್ರೀ ಅಸ್ತಿತ್ವ, ಸ್ತ್ರೀ ಅನನ್ಯತೆಯನ್ನು ಸುಲಭವಾಗಿ ಸ್ಥಾಪಿಸಬಹುದು ಎಂಬ ಗಟ್ಟಿ ಧ್ವನಿಯನ್ನು ಕುರಿತು ಚರ್ಚಿಸಿದೆ.
- ಅಧ್ಯಾಯ ಐದು : **'ಬದಲಾದ ಸ್ತ್ರೀ ಪ್ರತೀಕಗಳ ಮಾದರಿಗಳು'** ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಎಲ್ಲವನ್ನೂ ಒಪ್ಪಿಕೊಳ್ಳುವವಳಲ್ಲ. ಅವಳಿಗೂ ಅವಳದೇ ಆದ ಯೋಚನಾಶಕ್ತಿ ಇದೆ. ಸ್ವನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವಿದೆ. ಹೆಣ್ಣು ಕೇವಲ ಪುರುಷನ ಸ್ವತ್ತು ಎಂಬ ಆದರ್ಶದ ಕಲ್ಪನೆಯಲ್ಲಿ ಬದುಕುವ ಸಮಾಜದ ಬಯಕೆಯ ಜೀವಿಯಲ್ಲ ಎಂಬುದನ್ನು ಪೌರಾಣಿಕ ಕಾದಂಬರಿಗಳಲ್ಲಿ, ಸಾಮಾಜಿಕ ಕಾದಂಬರಿಗಳಲ್ಲಿ ಸ್ವಇಚ್ಛೆಯಿಂದ ಬದುಕುವ ಸ್ತ್ರೀ ಪಾತ್ರಗಳ ಮೂಲಕ ವಿಶ್ಲೇಷಿಸಿದೆ.

ಒಟ್ಟಾರೆ ಸಂಶೋಧನಾ ನೆಲೆಯಿಂದ ಕಂಡುಕೊಂಡ ಫಲಿತಗಳನ್ನು ಈ ಕೆಳಗಿನಂತೆ ದಾಖಲಿಸಬಹುದಾಗಿದೆ.

- 'ಸ್ತ್ರೀವಾದ' ಪ್ರಪಂಚದ ಎಲ್ಲಾ ಮಹಿಳೆಯರ ಪರವಾಗಿ ಎತ್ತಿರುವ ದನಿಯಾಗಿದೆ. ಇದು ಮಹಿಳೆಯರ ಅಭಿವೃದ್ಧಿಗಾಗಿ, ಮಹಿಳೆಯರ ವಿಮೋಚನೆಗಾಗಿ ಚಿಂತನೆ ಮಾಡುವ ತಾತ್ತ್ವಿಕ ವಿಚಾರಧಾರೆ. ಈ ನೆಲೆಗಟ್ಟಿನಲ್ಲಿ ರಚಿತವಾಗಿರುವ ಕಾದಂಬರಿಗಳ ಒಟ್ಟು ಅಧ್ಯಯನದಿಂದ ಸ್ತ್ರೀ ವಿಮೋಚನೆ, ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಅಂಶಗಳನ್ನು ಒತ್ತಿ ಹೇಳಿದೆ.
- ಆಯ್ದುಕೊಂಡಿರುವ ಕಾದಂಬರಿಗಳ ಮುಖ್ಯ ಆಶಯ ಸ್ತ್ರೀ ವಿಮೋಚನೆಯನ್ನೇ ಒಳಗೊಂಡಿದೆ.
- 'ಮುಂದೆ ಗುರಿಯಿದ್ದರೆ, ಹಿಂದೆ ಗುರುವಿದ್ದರೆ' ಪ್ರತಿಯೊಬ್ಬರೂ ಉತ್ತಮ ಸ್ಥಾನಕ್ಕೆ ಏರಬಹುದು ಎಂಬ ನಂಬಿಕೆಯನ್ನು ಬೆಳೆಸುವಲ್ಲಿ ಇಲ್ಲಿನ ಲೇಖಕಿಯರು ಸ್ಫೂರ್ತಿಯಾಗಿದ್ದಾರೆ. ಅಂದರೆ ಇಲ್ಲಿನ ಎಲ್ಲಾ ಲೇಖಕಿಯರು ಉತ್ತಮ, ಮಧ್ಯಮ, ಸಾಮಾನ್ಯ ವರ್ಗದವರಾಗಿದ್ದು, ಸಾಧನೆಯ ಮಾರ್ಗದಲ್ಲಿ ಬಡತನ ಮಾರಕವಾಗದೆ ಬದುಕುವ ಕೆಚ್ಚೆದೆಯನ್ನು ಬೆಳೆಸುತ್ತಾರೆ. ಮಹಿಳೆಯರ ಆತ್ಮವಿಶ್ವಾಸಕ್ಕೆ ಇಲ್ಲಿನ ಸ್ತ್ರೀವಾದಿ ಲೇಖಕಿಯರೇ ಗುರುಗಳಂತೆ ಕಂಡುಬಂದಿದ್ದಾರೆ.
- ಸ್ವಾತಂತ್ರ್ಯಪೂರ್ವಕಾಲದಿಂದ, ಸ್ವಾತಂತ್ರ್ಯನಂತರದ ಕಾಲದವರೆಗೂ ಲೇಖಕಿಯರ ಬದುಕು ಅನಾವರಣಗೊಂಡಿರುವುದರಿಂದ ಸ್ತ್ರೀಯರ ಸ್ಥಿತಿಗತಿಯ ಪಕ್ಷಿನೋಟ ಎಂಬಂತೆ ಬಿಂಬಿತವಾಗಿದೆ. ಈ ಮೂಲಕ ಯಾವುದೇ ಕಥೆ ಎಂಬ ಭಾವಕ್ಕೆ ಅಥವಾ ಕಲ್ಪನೆಗೆ ಒಳಗಾಗದೆ ಹೆಣ್ಣಿನ ಸ್ಥಿತಿ ಹೇಗಿತ್ತು ಎಂಬುದನ್ನು 'ಲೇಖಕಿಯರ ಪರಿಚಯ'ದ ಮೂಲಕ ತಿಳಿದುಕೊಳ್ಳಬಹುದು.
- ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯದ ಲೇಖಕಿಯರ ಮನೋಭಾವ ಎಂ.ಕೆ.ಇಂದಿರಾ, ತ್ರಿವೇಣಿ ಇವರು ನವೋದಯ, ಪ್ರಗತಿಶೀಲ ಕಾಲಘಟ್ಟದಲ್ಲಿ ಬರುವವರು. ಇವರ ಕಾದಂಬರಿಗಳಲ್ಲಿ ಹೆಣ್ಣು ಬಂಧಿಯಾಗಿರುತ್ತಾಳೆ. ಪುರುಷಪ್ರಧಾನ ಸಮಾಜದಿಂದ ಹೊರಬರುವ ಪ್ರಯತ್ನ ಕಂಡುಬರುವುದಿಲ್ಲ. ಈ ಕಾಲಘಟ್ಟದಲ್ಲಿ ಸ್ತ್ರೀ ಬಹಳ ಶಾಂತವಾಗಿಯೇ ಬದುಕುವುದನ್ನು ಒಳಗೊಂಡಿದೆ. ಇದೇ ಕಾಲಘಟ್ಟದಲ್ಲಿ ಕಂಡುಬರುವ ಎಚ್.ವಿ.ಸಾವಿತ್ರಮ್ಮನವರ ಕಾದಂಬರಿಗಳು ಮತ್ತು ಅನುಪಮಾ ನಿರಂಜನರವರ 'ಮಾಧವಿ' ಕಾದಂಬರಿ ಮಹಿಳಾ ಸಾಹಿತ್ಯದಲ್ಲಿಯೇ ಹೊಸ ಸಂಚಲನವನ್ನು ಉಂಟುಮಾಡಿದೆ. ಈ ಕಾದಂಬರಿಗಳಲ್ಲಿನ ಹೆಣ್ಣು ಪುರುಷಪ್ರಧಾನ ಸಮಾಜವನ್ನು ಧಿಕ್ಕರಿಸಿ ಬದುಕುವುದನ್ನು ಒಳಗೊಂಡಿದೆ. ಪ್ರಗತಿಶೀಲದ ಮತ್ತೊಬ್ಬ ಲೇಖಕಿ ಎಚ್.ಎಸ್.ಪಾರ್ವತಿಯವರ 'ಜಬಾಲಾ' ಕಾದಂಬರಿ ಹೆಣ್ಣು ಸ್ವಹಿತಕ್ಕಾಗಿ ಬದುಕುವುದನ್ನು, ನವ್ಯಸಾಹಿತ್ಯಕ್ಕೆ ಸೇರಿದ ವೀಣಾ ಶಾಂತೇಶ್ವರರವರ 'ಗಂಡಸರು' ಕಾದಂಬರಿ ಹೆಣ್ಣಿನ ಜೀವನದಲ್ಲಿ ನಡೆಯುವ ಸತ್ಯಕಥೆಯನ್ನು

ಒಳಗೊಂಡಿದೆ. ಇಲ್ಲಿಯೂ ಹೆಣ್ಣು ಮುಕ್ತವಾಗಿ ಬದುಕಲು ಅವಕಾಶ ನೀಡಿದೆ. ದಲಿತ–ಬಂಡಾಯ ಸಾಹಿತ್ಯಕ್ಕೆ ಸೇರುವ ಗೀತಾ ನಾಗಭೂಷಣ, ಬಿ.ಟಿ.ಲಲಿತಾ ನಾಯಕ್‌ರವರ ಧೋರಣೆಗಳು ಸಮಾಜದ ವಿರುದ್ಧವೇ ಬಂಡೇಳುವ ಸ್ತ್ರೀಪಾತ್ರಗಳನ್ನು ಸ್ಥಾಪಿಸಿವೆ. ಈ ಎಲ್ಲಾ ಕಾಲಘಟ್ಟದಲ್ಲಿ ರಚಿತವಾಗಿರುವ ಕಾದಂಬರಿಗಳಿಂದ ತಿಳಿದುಬರುವುದೆಂದರೆ ಸ್ತ್ರೀಪರವಾದ ಆಲೋಚನೆಯಲ್ಲಿಯೂ ಬದಲಾವಣೆ ಆಗಿರುವುದು ಕಂಡುಬಂದಿದೆ. ಸ್ತ್ರೀಪಾತ್ರಗಳು ಮೌನ ಪ್ರತಿಭಟನೆಯಿಂದ; ಮಾತನಾಡುವಷ್ಟರಮಟ್ಟಿಗಿನ ಬೆಳವಣಿಗೆಯಾಗಿರುವುದು ಸಾಹಿತ್ಯದ ಕಾಲಘಟ್ಟದ ಅನುಸಾರ ತಿಳಿದುಬಂದಿದೆ.

- ಕೆಲವು ಲೇಖಕಿಯರು ಪುರುಷಪ್ರಧಾನ ಸಮಾಜದಲ್ಲಿಯೇ ಬದುಕುತ್ತಿದ್ದುದ್ದರಿಂದ ಅಂದಿನ ಕಾಲದಲ್ಲಿ ವ್ಯವಸ್ಥೆಯನ್ನು ಮೀರಿ ನಡೆಯುವುದು ಸುಲಭವಾಗಿಲ್ಲದ ಕಾರಣ ಆ ಸಮಾಜದೊಳಗೇ ಇದ್ದುಕೊಂಡು ಹೆಣ್ಣಿನ ಅಸ್ತಿತ್ವ ಸ್ಥಾಪಿಸುವ ಪ್ರಯತ್ನ ಅವರ ಕಾದಂಬರಿಗಳ ಮೂಲಕ ಕಂಡುಬಂದಿದೆ.

- ಇಲ್ಲಿನ ಬಹುತೇಕ ಕಾದಂಬರಿಗಳು ಸ್ತ್ರೀತನವನ್ನು ಸ್ಥಾಪಿಸಲು ಸ್ವಸಾಮರ್ಥ್ಯ, ಸ್ವ–ಅರಿವು, ಸ್ವವಿಮರ್ಶೆಯಿದ್ದರೂ, ಇರದಿದ್ದರೂ ಪುರುಷರ ಸಹಾಯ ಬೇಕೆಂಬಂತೆ ರಚಿತವಾಗಿರುವುದನ್ನು ಕಾಣಬಹುದು. ಉದಾ: 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯ ಮಾಲತಿ ತಂದೆ ಒಪ್ಪಿದ ನಂತರವೇ ಮರು ವಿವಾಹವಾಗುತ್ತಾಳೆ. 'ಕಸೂತಿ' ಕಾದಂಬರಿಯಲ್ಲಿ ಜಯಾ, ಸರಸ್ವತಿ, ಸಾವಿತ್ರಿ (ಸಾತು) ಇವರ ಬದುಕಿಗೆ ವೆಂಕಣ್ಣ, ಸಾವಿತ್ರಿಯ ತಂದೆಯ ಸಹಾಯದಿಂದ ದಾರಿಯಾಗುತ್ತದೆ. 'ಜಬಾಲಾ' ಕಾದಂಬರಿಯಲ್ಲಿ ಗೀತಾಳ ತಂದೆಯ ಬುದ್ಧಿ ಮಾತುಗಳು 'ರೋಷದಿಂದ ಮುಕ್ತಳನ್ನಾಗಿ ಮಾಡಿ ಮನುಷ್ಯತ್ವದ ಬದುಕಿಗೆ ದೂಡುತ್ತದೆ. ಹೀಗೆ ಪುರುಷರ ಸಹಾಯದಿಂದ ಸ್ತ್ರೀ ಬದುಕು ಕಟ್ಟಿಕೊಳ್ಳುವುದನ್ನು ಕಾಣಬಹುದು. ಇಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಪುರುಷನಿಂದ ರೂಪಿತಳಾಗುತ್ತಾಳೆ ಎಂಬ ಅಂಶವನ್ನು, ಮತ್ತೊಂದೆಡೆ ಸ್ತ್ರೀಮನಸ್ಕ ಪುರುಷರು ಹೆಚ್ಚಾಗಿ ಹುಟ್ಟಿಕೊಳ್ಳಬೇಕು ಎಂಬ ಸಂದೇಶದಂತಿದೆ. ಮತ್ತೊಂದೆಡೆ ಸ್ತ್ರೀ ಸಮಾನತೆಯ ನೆಲೆಗಳನ್ನು ಹೋಗಲಾಡಿಸಬೇಕಾದವರು ಪುರುಷರೇ ಆಗಿರುವುದರಿಂದ ಅವರಿಂದಲೇ ಬದಲಾವಣೆ ಉಂಟಾದಾಗ ಸಮಾಜದಲ್ಲಿ ಲಿಂಗ ಸಮಾನತೆಯನ್ನು ಕಾಣಬಹುದು.

- ಕಾದಂಬರಿಗಳ ವಸ್ತು–ವಿಷಯದಲ್ಲಿ ವಿಭಿನ್ನತೆ–ಸಾಮ್ಯತೆಗಳೆರಡೂ ಕಂಡುಬಂದಿವೆ. ಸಮಕಾಲೀನ ಸಾಮಾಜಿಕ ಬದುಕಿಗೆ ಸ್ಪಂದಿಸುವ ಕಾದಂಬರಿಗಳ ವಸ್ತು ವಿಭಿನ್ನವಾಗಿ, ವೈವಿಧ್ಯಮಯವಾಗಿ ರಚನೆಯಾಗಿವೆ. ಇಲ್ಲಿನ ಕಾದಂಬರಿಗಳ ವಸ್ತುವಿನ ತುಂಬಾ ಸ್ತ್ರೀ ಇದ್ದಾಳೆ.

- ಲೇಖಕಿಯರು ತಮ್ಮ ಜೀವನದ ಅನುಭವಗಳನ್ನು ದಾಖಲಿಸುವ ಮೂಲಕ ಸಮಾಜದಲ್ಲಿ ನಿರ್ಮಾಣವಾಗುವ ಜಾತಿವಾರು ಸ್ತ್ರೀ ಪಾತ್ರಗಳ ಪರಿಚಯವಿದೆ. ಹೆಚ್ಚಾಗಿ ಮಧ್ಯಮವರ್ಗದ ಬ್ರಾಹ್ಮಣ ಕುಟುಂಬದವರ ಬದುಕು, ಕೆಳಜಾತಿಗೆ ಸೇರಿದ ಸ್ತ್ರೀಯರ ಬದುಕು ಅನಾವರಣಗೊಂಡಿದೆ. ಇದರಿಂದ ಹೆಣ್ಣು ಯಾವ ಜಾತಿಯಲ್ಲಿಯೇ ಹುಟ್ಟಿದರೂ ಅವಳು ಶೂದ್ರರಿಗಿಂತ ಕಡೆಯ ಬಾಳನ್ನು ಬದುಕುತ್ತಿದ್ದಾಳೆ.

- ಸಮಾಜದಲ್ಲಿ ಹರಡಿದ್ದ ಕೆಲವು ಮೂಢನಂಬಿಕೆಯಿಂದಾಗಿ ಮಹಿಳೆಯರು ಶೋಷಣೆಗೊಳಪಡುತ್ತಿದ್ದ ರೀತಿಯನ್ನು ಕಾದಂಬರಿಗಳಲ್ಲಿ ಲೇಖಕಿಯರು ಮನಮುಟ್ಟುವಂತೆ ನಿರೂಪಿಸಿದ್ದಾರೆ. ಜೀವನದಲ್ಲಿ ಪ್ರತಿಯೊಂದು ಹೆಜ್ಜೆಗೂ ಸಂಪ್ರದಾಯದ ಉಸಿರುಗಟ್ಟಿದ ವಾತಾವರಣಕ್ಕೆ ಸಿಕ್ಕಿಕೊಳ್ಳುವುದನ್ನು ಫಣಿಯಮ್ಮ, ಬದುಕು, ಹಣ್ಣೆಲೆ ಚಿಗುರಿದಾಗ, ಚಂದ್ರಗಿರಿಯ ತೀರದಲ್ಲಿ ಕಾದಂಬರಿಗಳಿಂದ ತಿಳಿಯಬಹುದು. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಸ್ತ್ರೀ ಶೋಷಣೆಗೆ ಒಳಪಡುತ್ತಿದ್ದಾಳೆ ಎಂಬುದನ್ನು ಗುರುತಿಸಲಾಗಿದೆ.

- ಹೆಣ್ಣು ಎಂದರೆ 'ಭೋಗದ ವಸ್ತು', 'ಹೆರುವ ಯಂತ್ರ' ಎಂದೇ ಭಾವಿಸುತ್ತಿರುವವರು ಆಕೆಯ ಜೀವನ ಸಾರ್ಥಕವಾಗಬೇಕಾದರೆ ತಾಯ್ತನದಿಂದ ಎಂಬ ಕಲ್ಪನೆಯನ್ನು ಹುಟ್ಟು ಹಾಕಿದ್ದಾರೆ. ಇದು ಹೆಣ್ಣನ್ನು ಮಾನಸಿಕವಾಗಿ, ದೈಹಿಕವಾಗಿ ಕುಗ್ಗಿಸುವ ಪ್ರಯತ್ನವಾಗಿದೆ.

- ಇದರ ಬೆನ್ನಲ್ಲೇ ಹೆಣ್ಣನ್ನು ಬಂಜೆ ಎಂದು ದೂರುವುದನ್ನು ತಡೆಯುವಂತೆ ಹೆಣ್ಣಿನ ಬಂಜೆತನಕ್ಕೆ ಪುರುಷನೂ ಕಾರಣಕರ್ತನಾಗಿರುತ್ತಾನೆ ಎಂಬ ನೈಜ ಸತ್ಯತೆಯ ಅರಿವು ಬೆಳೆಸುತ್ತದೆ. ಹೆಣ್ಣನ್ನು ಮಾತರ ನಿಂದಿಸುವವರಿಗೆ ಸತ್ಯಾಸತ್ಯತೆ ಅರಿಯುವ ಮನವರಿಕೆಯ ಅಂಶ ಬಿತ್ತಲಾಗಿದೆ.

- ಸಮಾಜದಲ್ಲಿ ಪುರುಷರೆ ಲೈಂಗಿಕ ಸ್ವಾತಂತ್ರ್ಯವನ್ನು ಮುಕ್ತವಾಗಿ ಪಡೆಯುತ್ತಿದ್ದಾರೆ. ಲೈಂಗಿಕ ಸ್ವಾತಂತ್ರ್ಯ ಹೆಣ್ಣಿಗೂ ದೊರೆಯಬೇಕು ಎಂಬುದಕ್ಕಿಂತಲೂ ಗಂಡಿನಲ್ಲೂ ಇಂತಹ ನಿರ್ಬಂಧಗಳನ್ನು ಸಮಾಜ ಹೇರಬೇಕು. ಹೆಣ್ಣಾದವಳು ತನ್ನನ್ನು ತಾನು ಕಾಯ್ದುಕೊಂಡು, ಒಂದು ವೇಳೆ ಪುರುಷರ ಮೋಹ ಪಾಶಕ್ಕೆ ಒಳಗಾದರೂ ಸಮಾಜದಲ್ಲಿ ನೀತಿಗೆಟ್ಟವಳು ಎಂಬ ಶಿಕ್ಷೆಗೆ ಗುರಿಯಾಗುತ್ತಾಳೆ. ಈ ತತ್ವ ಪುರುಷರಲ್ಲೂ ಪಾಲಿಸಿದಾಗ ಹೆಣ್ಣು ಗುರಿಯಾಗುವ ಪ್ರಮೇಯವೇ ಇರುವುದಿಲ್ಲ. ಇಲ್ಲಿನ ಕೆಲವು ಕಾದಂಬರಿಗಳಲ್ಲಿ ಪುರುಷರ ಲೈಂಗಿಕ ಸ್ವಾತಂತ್ರ್ಯ ಈ ಭಾವನೆಯನ್ನು ಮೂಡಿಸುತ್ತದೆ.

- ಈ ಸಂಶೋಧನೆಯು ಪುರುಷಪ್ರಧಾನ ಸಮಾಜಕ್ಕೆ ಅಂಟಿಕೊಂಡೇ ಬದುಕದ ಪುರುಷ ಪರವಾದ ನಿಯಮಗಳನ್ನು ಉಲ್ಲಂಘಿಸಿದ ಸ್ತ್ರೀ ಪಾತ್ರಗಳಿಂದ ಹೆಣ್ಣು ಶೋಷಿತಳಾಗಿಯೇ ಬದುಕಬೇಕೆಂಬುದಿಲ್ಲ ಎಂಬ ಅರಿವು ಉಂಟುಮಾಡಿದೆ.

- ಶಿಕ್ಷಣ ಮಾನವನನ್ನು ಸಮಾಜದಲ್ಲಿ ಉತ್ತಮ ನಾಗರಿಕನನ್ನಾಗಿ ಸೃಷ್ಟಿಸುತ್ತದೆ. ಇಲ್ಲಿನ ಕೆಲವು ಕಾದಂಬರಿಗಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವಕೊಟ್ಟಿವೆ. ಸ್ವ–ಅರಿವು, ಸ್ವ–ಚಿಂತನೆ ಬೆಳೆಸಿಕೊಳ್ಳಲು ಶಿಕ್ಷಣ ಅತ್ಯವಶ್ಯಕವಾಗಿದೆ. ಇಂತಹ ಶಿಕ್ಷಣ ಸ್ತ್ರೀಯರಿಗೂ ದೊರೆತರೆ ಸಮಾಜದಲ್ಲಿ ಸ್ತ್ರೀ ಅನನ್ಯತೆ, ಸ್ತ್ರೀ ಅಸ್ತಿತ್ವ ಸ್ಥಾಪಿಸಬಹುದಾಗಿದೆ. ಇದರಿಂದ ಹೆಣ್ಣಿನ ಬದುಕು ಹಸನಾಗುತ್ತದೆ. ಅಕ್ಷರಸ್ಥರು, ಅನಕ್ಷರಸ್ಥರು ಬದುಕು ಕಟ್ಟಿಕೊಳ್ಳುವುದರಲ್ಲಿಯೇ ಭಿನ್ನತೆ ಕಾಣುತ್ತದೆ. ಅಕ್ಷರಸ್ಥರು ಸ್ವಹಿತಕ್ಕಾಗಿ ಬದುಕಿದರೆ, ಅನಕ್ಷರಸ್ಥರು ಸಮಾಜದ ಹಿತಕ್ಕಾಗಿ ಬದುಕುತ್ತಾರೆ. ಇದರಿಂದ ಅನಕ್ಷರಸ್ಥರು ನೆಮ್ಮದಿ, ಸಂತೋಷ ಕಳೆದುಕೊಳ್ಳುತ್ತಾರೆ ಎಂದು ಸಾರುವಂತೆ ಸ್ತ್ರೀಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿರುವುದು ಕಂಡುಬಂದಿದೆ.

- ಸ್ತ್ರೀ ಸ್ವಾವಲಂಬಿ ಜೀವನಕ್ಕೆ ಮತ್ತು ಹೆಣ್ಣು ಪರಾವಲಂಬಿಯಲ್ಲ ಎಂಬ ಮನೋಭಾವ ಬೆಳೆಸಲು ಉದ್ಯೋಗದ ಅವಶ್ಯಕತೆಯನ್ನು ಗುರುತಿಸಲಾಗಿದೆ. ಉದ್ಯೋಗ ಹೆಣ್ಣಿನಲ್ಲಿ ಸ್ವ–ಬದುಕು ಕಟ್ಟಿಕೊಳ್ಳಲು ಸಹಾಯಕವಾಗಿದೆ.

- ಪ್ರತಿಭಟಿಸುವ ನೆಲೆ ಎಚ್.ವಿ.ಸಾವಿತ್ರಮ್ಮನವರ, ಅನುಪಮಾ ನಿರಂಜನರವರ ಮೂಲಮಂತ್ರವಾಗಿದೆ. ಮಹಿಳೆ ತನ್ನ ಬಯಕೆ, ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲಾಗದೆ. ಒಳಗೊಳಗೆ ಚಡಪಡಿಸುತ್ತಿರುತ್ತಾಳೆ. ಅವಳು ಸ್ವತಂತ್ರವಾಗುವ ಆಕಾಂಕ್ಷೆಯನ್ನು ಹೊಂದಿರುತ್ತಾಳೆ. ಅದನ್ನು ಹೆಣ್ಣು ಸ್ವ–ಸಾಮರ್ಥ್ಯದಿಂದ ಪಡೆದುಕೊಳ್ಳಬೇಕೆಂಬುದನ್ನು ಅವರ ಪೌರಾಣಿಕ, ಕಾದಂಬರಿಗಳಲ್ಲೂ ಹೇಳಿರುವ ಸೂಚ್ಯವಿದೆ.

- ಹೆಣ್ಣಿಗೂ ಮನಸ್ಸಿದೆ, ಭಾವನೆಗಳಿವೆ, ಅವಳಿಗೂ ಸ್ವತಂತ್ರವಾಗಿ ಬದುಕುವ ಹಕ್ಕಿದೆ. ಹೆಣ್ಣು ಹಿಂಸೆ, ನೋವು, ಸಂಕಟಗಳೊಳಗೆ ಬೇಯುವವಳಲ್ಲ ಎಂಬ ಅರಿವು ಮೂಡಿದೆ. ಸ್ತ್ರೀಯರಲ್ಲಿ ಬದುಕುವ ಸ್ಥೈರ್ಯ ಬೆಳೆಸುತ್ತದೆ.

- ಅಸ್ಪೃಶ್ಯರು, ಹಣ್ಣೆಲೆ ಚಿಗುರಿದಾಗ, ಕಸೂತಿ ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಇವುಗಳ ನಡುವಿನ ಸಂಘರ್ಷಗಳಿವೆ.

- ಸಮಾಜದಲ್ಲಿ ಸಭ್ಯತೆ, ಸೌಜನ್ಯತೆಯ ಮುಖವಾಡಧಾರಿಗಳ ಪುರುಷರ ಪರಿಚಯ ಕಾದಂಬರಿಗಳಲ್ಲಿ ಕಂಡುಬಂದಿದೆ. ಅವರ ಸೌಮ್ಯತೆಯ, ಸ್ತ್ರೀಸಮಾನತೆ ಎಂಬ ಭಾವನೆಯ

ನಡುವೆಯು ಸ್ತ್ರೀ ವಿರುದ್ಧವಾದ ಕ್ರೂರತೆ ಅವಿತುಕೊಂಡಿರುತ್ತದೆ. ಅದನ್ನು ಹೊರತಂದಿರುವ ಉದ್ದೇಶ, ಹೆಣ್ಣು ಸಮಾಜದಲ್ಲಿ ಎಚ್ಚರಿಕೆಯಿಂದ ಬದುಕಬೇಕು ಎಂಬ ಆಶಯವನ್ನು ಗುರುತಿಸಿದೆ.

- ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯ ನಂತರದ ಕಥೆಗಳಿಂದ ಹೆಣ್ಣಿನ ಜೀವನವನ್ನು ಕಾಲಾನುಕ್ರಮಣಿಕೆಯಂತೆ ಕಟ್ಟಿಕೊಟ್ಟಿರುವುದು ಕಂಡುಬಂದಿದೆ. ಆಯಾ ಕಾಲದಲ್ಲಿ ಆಯಾ ಸಂದರ್ಭಗಳಲ್ಲಿ ಹೆಣ್ಣು ಯಾವ ರೀತಿಯ ಬದುಕು ನಡೆಸುತ್ತಿದ್ದಳು ಎಂಬುದನ್ನು ಹಿಂದಿನ ಕಾಲದಿಂದ ಆಧುನಿಕ ಕಾಲದವರೆಗೂ ಹೆಣ್ಣಿನ ಜೀವನ ಚಿತ್ರಣವಿದೆ. ಕಠಿಣ ಸಂಕೋಲೆಯಿಂದ, ಸುಲಭ ಬಂಧನದವರೆಗೂ ಹೆಣ್ಣು ಅನುಭವಿಸುವ ಸಂಕಷ್ಟಗಳಿವೆ. ಅಲ್ಲದೇ ಹೆಣ್ಣಿನ ಬದುಕು ಬದಲಾವಣೆಯತ್ತ ಸಾಗಿರುವುದು ಕಂಡುಬಂದಿದೆ. ಕಾಲ ಬದಲಾದಂತೆ ಮನಸ್ಸು ಬದಲಾಗುವ ಸೂಚ್ಯವಿದೆ.
- ಸಮಕಾಲೀನ ಸಾಮಾಜಿಕ ಬದುಕಿಗೆ ಸ್ಪಂದಿಸುವ ಕಥೆಗಳಿದ್ದು ಬದುಕಿನ ನೈಜ ಚಿತ್ರಣವನ್ನು ಕೊಡುತ್ತವೆ.
- ಇಲ್ಲಿನ ಸ್ತ್ರೀಪಾತ್ರಗಳು ಪಾರಂಪರಿಕ ನಂಬಿಕೆಯನ್ನು ಒಡೆದುಹಾಕಿ ಬದುಕುವ ಧೈರ್ಯೋತ್ಸಾಹಿಗಳಾಗಿದ್ದಾರೆ. ಆದರ್ಶದ ಕಲ್ಪನೆಯನ್ನು ಸ್ತ್ರೀ ಅಸ್ತಿತ್ವ ಸ್ಥಾಪಿಸುವ ಹೊಸ ಮಾದರಿಯಲ್ಲಿ ಸೃಷ್ಟಿಸಿವೆ.
- ರೋಷ–ದ್ವೇಷ, ಹಗೆತನ, ಸ್ವಾರ್ಥ, ಪ್ರೀತಿ–ಪ್ರೇಮ, ಕಾಮ ಇವೆಲ್ಲವೂ ಹೆಣ್ಣಿನಲ್ಲೂ ಇರುವುದನ್ನು ಕಾಣಬಹುದು.
- ಪೌರಾಣಿಕ ವಸ್ತುಗಳನ್ನು ಸಮಕಾಲೀನಗೊಳಿಸಿಕೊಂಡ ವಾಸ್ತವಿಕ ನೆಲೆಗಟ್ಟಿನಲ್ಲಿ ರಚಿತವಾಗಿರುವುದು ಕಂಡುಬಂದಿದೆ.

ಒಟ್ಟಾರೆ ಈ ಸಂಶೋಧನೆಯಿಂದಾಗಿ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಅಸ್ತಿತ್ವವಿಲ್ಲದೆ ಶೋಷಣೆಗೆ ಒಳಪಟ್ಟಿದ್ದಾಳೆ. ಅದರಿಂದ ಹೊರಬರುವ ಪ್ರಯತ್ನ ಮಾಡಿದ್ದಾಳೆ. ಸಮಾಜದಲ್ಲಿ ಹೆಣ್ಣು ಅಧೀನ, ಪರಾವಲಂಬಿ ಎಂಬುದನ್ನು ಒಡೆದುಹಾಕಿ ಸ್ವತಂತ್ರವಾಗಿ ಬದುಕಬಲ್ಲಳು ಎಂಬುದನ್ನು ಈ ಸಂಶೋಧನೆಯಿಂದ ತೋರಿಸಿಕೊಟ್ಟಿದೆ. ಇದರಿಂದ ಹೆಣ್ಣು ಶೋಷಿತಳಾಗಿಯೇ ಬದುಕಬೇಕಿಲ್ಲ ಅವಳಿಗೂ ಅವಳದೇ ಆದ ಅಸ್ತಿತ್ವವಿದೆ, ಹಕ್ಕಿದೆ, ಸ್ವಾತಂತ್ರ್ಯವಿದೆ ಅದನ್ನು ಬಹಳ ಜಾಗೃತಿಯಿಂದ ಬಳಸಿಕೊಳ್ಳಬೇಕೆಂಬ ಅರಿವನ್ನು ಸಮಾಜಕ್ಕೆ ಸಾರಿದೆ.

ಇಂದು ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆದಿದ್ದಾಳೆ. ಗಂಡನ್ನು ಮೀರಿಸುತ್ತಿದ್ದಾಳೆ. ಇಂಥ ಮಾತುಗಳು ಕೇಳಿಬರುತ್ತಿವೆ. ಹೆಣ್ಣಿನ ಉಡುಪು, ಆಹಾರ, ವೈಯಕ್ತಿಕ ವಿಚಾರಗಳನ್ನು ಕಂಡು, ಕೇಳಿ ಆಕೆ ಮುಂದುವರೆದಿದ್ದಾಳೆ ಎಂದು ಯೋಚಿಸುವ ಪರಿ ಬದಲಾಗಬೇಕಿದೆ. ಸಮಾಜದಲ್ಲಿ ಮುಂದುವರೆದ, ಮೇಲ್ವರ್ಗದ, ನಗರಗಳಲ್ಲಿರುವ ಹೆಂಗಳೆಯರನ್ನು ನೋಡಿ ಈ ನಿರ್ಧಾರಕ್ಕೆ ಬರುವುದು ತಪ್ಪು ಕಲ್ಪನೆಯಾಗಿದೆ. ಇಂದಿಗೂ ಹೆಣ್ಣು ಶೋಷಣೆಗೆ ಒಳಗಾಗಿ ಬದುಕುತ್ತಿದ್ದಾಳೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಮಾತು ನೆನಪಿಗೆ ಬರುತ್ತದೆ. 'ಹೆಣ್ಣೊಬ್ಬಳು ಎಂದು ಮಧ್ಯರಾತ್ರಿಯಲ್ಲಿ ನಿರ್ಭೀತಿಯಿಂದ ನಡೆದುಕೊಂಡು ಹೋಗುತ್ತಾಳೊ ಅಂದು ದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆತಂತೆ'. ಸ್ತ್ರೀ ಸಮಾಜದ ಒಂದು ಬಂಧನದಿಂದ ಮುಕ್ತಿ ಪಡೆಯುತ್ತಿದ್ದಂತೆ ಮತ್ತೊಂದು ಸಮಸ್ಯೆಗೆ ಗುರಿಯಾಗುತ್ತಿದ್ದಾಳೆ. ಅತ್ಯಾಚಾರ ಎಂಬುದು ಇತ್ತೀಚೆಗೆ ತಾಂಡವವಾಡುತ್ತಿರುವ ಮಹಾಮಾರಿಯಾಗಿದ್ದು ಸ್ತ್ರೀಯರ ಧೈರ್ಯವನ್ನು ಕುಂಠಿತಗೊಳಿಸುತ್ತಿದೆ. ಇದು ಕಣ್ಣೆದುರಿಗೆ ಕಾಣುವ ಸತ್ಯವಾದರೆ ಬಾಲ್ಯವಿವಾಹ, ವರದಕ್ಷಿಣೆಯ ಪಿಡುಗು, ವಿಧವೆಯರಿಗೆ ಇರುವ ಅಡೆತಡೆಗಳು ಕಣ್ಮರೆಯಾಗಿ ನಡೆಯುತ್ತಲೇ ಇವೆ. ಇದನ್ನು ಪರಿಗಣಿಸಿ ಸರ್ಕಾರ, ನ್ಯಾಯಾಲಯ ವಿಶೇಷ ಕಾನೂನುಗಳನ್ನು ಜಾರಿಗೆ ತರಬೇಕಿದೆ. ಈಗಾಗಲೇ ವರದಕ್ಷಿಣೆ ನಿಷೇಧ ಕಾನೂನು, ಅತ್ಯಾಚಾರಿಗಳಿಗೆ ಶಿಕ್ಷೆ, ಮೀಸಲಾತಿ ಸೌಲಭ್ಯ, ಲೈಂಗಿಕ ಕಿರುಕುಳಗಳಿಗೆ ಶಿಕ್ಷೆ ಮುಂತಾದವುಗಳನ್ನು ರೂಪಿಸಿದ್ದರೂ ವಿಫಲವಾಗುತ್ತಿರುವುದು ವಿಷಾದನೀಯ ಸಂಗತಿ. ಇವುಗಳನ್ನು ಸರಿಮಾಡುವ ನಿಟ್ಟಿನಲ್ಲಿ ಸರ್ಕಾರ, ನ್ಯಾಯಾಲಯ, ಕಾನೂನುಗಳು, ಸಾಹಿತಿಗಳು, ರಾಜಕಾರಣಿಗಳು, ಸಂಘಸಂಸ್ಥೆಗಳು ದುಡಿಯಬೇಕಿದೆ.

ಇವೆಲ್ಲಕ್ಕೂ ಮಿಗಿಲಾಗಿ ಸ್ತ್ರೀಸಮಾನತೆ, ಸ್ತ್ರೀಸ್ವಾತಂತ್ರ್ಯ ಆಶಯ ಪ್ರತಿಯೊಬ್ಬ ಮನುಷ್ಯನಲ್ಲೂ ವೈಯಕ್ತಿಕವಾಗಿ ಬೆಳೆಸಿಕೊಂಡರೆ ಒತ್ತಾಯಪೂರ್ವಕ ನಿಬಂಧನೆಗಳ ಅವಶ್ಯಕತೆ ಇರುವುದಿಲ್ಲ. ಸ್ತ್ರೀಶೋಷಣೆ, ಅತ್ಯಾಚಾರ ಮುಂತಾದ ಸಮಸ್ಯೆಗಳು ಕಾಣುವುದಿಲ್ಲ. ಎಲ್ಲಿಯವರೆಗೂ ಹೆಣ್ಣು ಸ್ವತಂತ್ರ ಜೀವಿ, ಅವಳಿಗೂ ಅವಳದೇ ಆದ ಅಸ್ತಿತ್ವವಿದೆ ಎಂಬ ಭಾವನೆ ಸ್ತ್ರೀ–ಪುರುಷರಿಬ್ಬರಲ್ಲೂ ಮೂಡುವುದಿಲ್ಲವೊ ಅಲ್ಲಿಯವರೆವಿಗೂ ಸಮಾಜದಲ್ಲಿ ಅಸಮಾನತೆಗಳು ತಾಂಡವವಾಡುತ್ತಿರುತ್ತವೆ. ಇದರಿಂದ ಕುಸಿಯುತ್ತಿರುವವರೆ ಮೇಲೇಳಬೇಕಿದೆ. ಸ್ವತಃ ಸ್ತ್ರೀ ಸ್ವಸಾಮರ್ಥ್ಯದಿಂದ ಬದುಕನ್ನು ಕಟ್ಟಿಕೊಳ್ಳುವುದನ್ನು ಪ್ರಸ್ತುತ ಮಹಾಪ್ರಬಂಧವು ಒಳಗೊಂಡಿದೆ. ಈ ಸಂಶೋಧನಾ ಮಹಾಪ್ರಬಂಧದ ಅಧ್ಯಯನವು ಸಮಾಜದಲ್ಲಿ 'ಸ್ತ್ರೀ–ಪುರುಷರಿಬ್ಬರೂ ಸಮಾನತೆಯಿಂದ ಬದುಕಬೇಕು. ಬದುಕಲು ಬಿಡಬೇಕು' ಎಂಬುದನ್ನು ಘಂಟಾಘೋಷವಾಗಿ ಹೇಳುತ್ತಿದೆ.